ಖರ್ಚುಮಾಡುತ್ತಿರುವುದು ಜಾಸ್ತಿಯಾಗಿದೆ, ಆದರೆ ಬದಲು ಪೌರಕಾರ್ಮಿಕರನ್ನು ನೇಮಿಸಿಕೊಂಡು ಕೆಲಸ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಪೌರಕಾರ್ಮಿಕರನ್ನು ನೇಮಿಸಿ ಕೊಂಡು ಮಾಡಿಸಬೇಕಾದರೆ ಒಂದೂವರೆ ಲಕ್ಷ ರೂಪಾಯಿ ಖರ್ಚಾಗುತ್ತದೆ. ಅದನ್ನೆಲ್ಲಾ ನೋಡಿಯೇ ನಾವು ಗುತ್ತಿಗೆಗೆ ಕೊಟ್ಟಿರುವುದು. ಇದರಲ್ಲಿ ಯಾವ ತರಹದ ವಿಶೇಷ ಆಸಕ್ತಿಯೂ ಇಲ್ಲ. ಟೆಂಡರ್ ಕಾಲ್‌ಫರ್ ಮಾಡಿದ್ದೇವೆ, ಹೆಚ್ಚು ಬಿಡ್ ಮಾಡಿದವರಿಗೆ ಕೆಲಸ ವಹಿಸಿಕೊಟ್ಟಿದ್ದೇವೆ.

*** Amount advanced by the Govt, and the BDCC Bank to the Hadaggali Sugar Factory Bellary**

150 SRI M. RAMAPPA (Kurugodu).— Will the Minister for Co-operation be pleased to state.—

a) the amount advanced by the Government and by the Bellary District Central Co-operative Bank te the Hadagali Sugar Factory. Ballary Taluk. before liquidation(may please be furnished)

(*b*) whether the money was advanced after the receipt of the expert Committees report, if so, the recommendation of the Committee for such advances (may please be furnished);

(*c*) measures taken by Government for the recovery of the money so far and the amount recovered so far; (may please be furnished)

(*d*) the persons responsible for mis-appropriation of the funds of the factory and the action against them;

(*e*) the amount still to be paid to the ryots towards the purchase of sugarcane (may please be furnished)?

SRI H. C. SRIKANTAIAH (Minister for Co-operation):—

(*a*) The details of amount advanced by the Government and by the BDCC Bank Ltd. Hospet to the Hire Hadagali Sugarcane Co-operative Socicty as on date of liquidation are as under;

Government amount before liquidation.

1	Share capital	Rs.	1,50,000
2	Working capital loan	Rs.	2,50,000
3	Godown loan	Rs.	9.375
4	Godown subsidy	Rs.	3,125
	Total	Rs.	4.12,500

II BDCC Bank Ltd., Hospet.

1	S. T. Loan	Rs. 35,0000
2	S. T. Loan.	Rs. 50,00
3	L.T. Loan on Govt. Guarantee.	Rs. 1,99,946
4	C. C. loan–I	Rs. 73,000
5	C. C. loan–II	Rs. 34.972
6	Sugarcane key loan.	Rs. 2,04,573
7	Godown loan.	Rs. 20.000
	Total	6,17,491

(*b*) At the time of advancing loan expert Committee's Report was not insisted upon. Money was advanced on therecommendation of the Departmental Officers,

(*c*) The Liquidator after assuming the charge of the society as its Liquidator on 13-9-1972, has recovered Rs. 97.513,00 towards lease amount for processing unit for 3 years period and remitted Rs. 1.04 lakhs during 1980-81 to BDCC Bank Ltd., Hospet towards Government Guarantee loan.

The Liquidator is taking action to dispose of the landed property and machinery etc., after collecting amount he will discharge the liabilities of Government, Bank and Cane Suppliers:

(*d*) No mis-appropriation cases have been detected in the business of the Society. Hence on persons are held responsible for mis-appropriation of funds of the factory;

(*e*) The society has to pay an amount of Rs, 1,39,437.25 to ryots towards sugarcane supplied by them.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ. ಬಳ್ಳಾರಿ ತಾಲ್ಲೂಕಿನ ಹಡಗಲಿ ಸಕ್ಕರೆ ಕಾರ್ಖಾನೆಯು ಆಡಿಟ್ ಆಗಿದೆಯೇ ? ಆಗಿದ್ದರೆ ವರದಿಯಲ್ಲಿ ಹಣ ದುರುಪಯೋಗವಾಗಿದೆ ಎಂದು ತಿಳಿಸಿದ್ದಾರೆಯೆ? ವರದಿಯಲ್ಲಿ ಯಾರು ಯಾರು ತಪ್ಪಿತಸ್ಥರು ಎಂದು ಹೇಳಿದ್ದಾರೆ ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಅಲ್ಲಿ ಯಾವುದೂ ಮಿಸ್ ಅಪ್ರೋಪ್ರಿಯೇಷನ್ ಆಗಿಲ್ಲ ಎಂದು ವರದಿಯಾಗಿದೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ೧೯೭೨ನೇ ಇಸವಿಯಲ್ಲಿ ಆಡಿಟ್ ಆಗಿದ್ದು ಅದರಲ್ಲಿ ಮಿಸ್ ಅಪ್ರೋಪಿಯೇಷನ್ ಆಗಿರುವುದು ವರದಿಯಾಗಿದೆ. ಆಡಿಟ್ ರಿಪೋರ್ಟ್‌ನಲ್ಲಿ ಆಸಿಸ್ಟೆಂಟ್ ರಿಜಿಸ್ಟ್ರಾರ್ ಆ ವಿಷಯವನ್ನು ತಿಳಿಸಿದ್ದಾರೆ. ನಮಗೂ ಅದರ ಕೆಲವು ಪ್ರತಿಗಳನ್ನು ಕೊಟ್ಟಿದ್ದಾರೆ. ಆದರಿಂದ ಮಾನ್ಯ ಮಂತ್ರಿಗಳು ಸುಳ್ಳು ಮಾಹಿತಿ ಕೊಡುತ್ತಿದ್ದಾರೆ ಎಂದು ಹೇಳುತ್ತೇನೆ.

SRI H. C. SRIKANTAIAH.—Sir, the question asked is, (d) the persons responsible for misappropriation of the funds of the factory and the factory and the action against them, for which we have given the following answer :

(d) No. mis-appropriation cases have been detected in the business of the Society. Hence no persons are held responsible for misappropriation of funds of the factory.

SRI K. BHASKAR NAIDU.—I have got the copy of the report of the Deputy Registrar of Co-operative Societies dated 21-8-1972. They have misused a huge sum of Rs. twelve lakhs and sixty seven thousand. It is not a small amount. This is the amount involved in one case. My friend Sri Ramappa did not elicit the names. Do you know who are the Directors and their influence ? The words that have been used are complete mismanagement, mal-administration, mis-application etc., The report clearly says that they have misused this huge amount of Rs. twelve lakhs and sixty seven thousand. The only word that the Deputy Registrar of Co-operative Societies has not used is misappropriation.

MR. SPEAKER.—Misappropriation is a different offence.

SRI K. BHASKAR NAIDU.—But these words are there. The Liquidather who has been appointed now, was formerly the Secretary there. So, no purpose will be served. We have materials to show that there was mis-appropriation. Are you prepared to re-examine the whole affair ?

SRI H. C. SRIKANTAIAH.—If the materials are given to me, they will be examined in detail.

SRI K. BHASKAR NAIDU.—By whom ?

SRI H. C. SRIKANTAIAH.—By the Government.

SRI K. BHASKAR NAIDU.—Are you prepared to instruct another enquiry ?

SRI H. C. SRIKANTAIAH.—Definitely. If you give the materials, I am prepared to effect an enquiry immediately.

ಶ್ರೀ ಬಿ. ವಿ. ಕಕ್ಕಿಲಾಯ.—ಹನ್ನೆರಡು ಲಕ್ಷ ರೂಪಾಯಿ ದುರುಪಯೋಗವಾಗಿದೆ, ಅಲ್ಲಿ ಆಡಳಿತ ಸರಿಯಾಗಿ ನಡೆದಿಲ್ಲ ಎಂಬ ವಿಚಾರಗಳನ್ನು ಮಾನ್ಯ ಸದಸ್ಯರು ಮಾನ್ಯ ಸಚಿವರ ಗಮನಕ್ಕೆ ತಂದಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಮಾಹಿತಿಗಳನ್ನು ಒದಗಿಸಿದರೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳುತ್ತಾರೆ. ಡೆಪ್ಯುಟಿ ರಿಜಿಸ್ಟ್ರಾರ್ ಅವರು ರಿಪೋರ್ಟ್‌ನಲ್ಲಿ ದುರ್ವಿನಿಯೋಗವಾಗಿರುವ ವಿಚಾರ ಹೇಳಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಮಂತ್ರಿಗಳ ಎಲ್ಲಾ ವರದಿ ಇದೆ. ಇಷ್ಟಿದ್ದೂ ಮಾಹಿತಿಗಳನ್ನು ಒದಗಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ಇನ್ನೇನು ಮಾಹಿತಿಗಳು ಬೇಕು ?

ಅಧ್ಯಕ್ಷರು.—ಮಿಸ್ ಅಪ್ರೋಪ್ರಿಯೇಷನ್ ಆಗಿದ್ದರ ಬಗ್ಗೆ ಮಾಹಿತಿ ಒದಗಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ಒತ್ತಿ ಹೇಳಿದರು. ಡೆಪ್ಯುಟಿ ರಿಜಿಸ್ಟ್ರಾರ್‌ರವರಿಂದ ಸರ್ಕಾರಕ್ಕೆ ಬಂದಿರುವ ವರದಿಯಲ್ಲಿ ಮಿಸ್ ಅಪ್ರೋಪ್ರಿಯೇಷನ್ ಎಂಬ ಪದ ಇಲ್ಲ. ಆದರೆ ಉಳಿದಿದ್ದೆಲ್ಲಾ ತಮ್ಮ ಗಮನಕ್ಕೆ ತಂದಿದ್ದಾರೆ. ವರದಿ ಮಾನ್ಯ ಮಂತ್ರಿಗಳ

ಕೈಯಲ್ಲಿದೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದರೆ ನನಗೆ ಆಶ್ಚರ್ಯವಾಗುತ್ತಿದೆ. ಗಂಭೀರವಾದ ಆರೋಪಗಳನ್ನು ಮಾಡಿ ಆ ಬಗ್ಗೆ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಸರ್ಕಾರದ ಗಮನಕ್ಕೆ ತಂದಿದ್ದರೂ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳುವುದರಲ್ಲಿ ಅರ್ಥವಿದೆಯೆ ? ಇನ್ನೇನು ಗಮನಕ್ಕೆ ತರಬೇಕು ? ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮತ್ತು ಸರ್ಕಾರದ ಬಳಿಯಿರುವ ವರದಿಯ ಆಧಾರದಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—೧೨ ಲಕ್ಷ ರೂಪಾಯಿ ಈ ಸಕ್ಕರೆ ಕಾರ್ಖಾನೆಯಲ್ಲಿ ಲುಕ್ಸಾನವಾಗಿದೆ ಎಂಬ ವರದಿ ನನ್ನಲ್ಲಿದೆ. ಈ ಬಗ್ಗೆ ಮಾನ್ಯ ಸದಸ್ಯರು ಇನ್ನೂ ಕೆಲವು ಮಾಹಿತಿಗಳನ್ನು ಒದಗಿಸಿದರೆ ಇದಕ್ಕೆ ಯಾರು ಕಾರಣಕರ್ತರು ಯಾರು ಮಿಸ್ ಆಪ್ರೋಪ್ರಿಯೇಟ್ ಮಾಡಿದ್ದಾರೆ ಎಂಬ ಬಗ್ಗೆ ವಿಚಾರಣೆ ಮಾಡಿಸುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರದಲ್ಲಿ ಒಂದು ಕಡೆ ''ಸಂಘದ ವ್ಯವಹಾರದಲ್ಲಿ ಹಣ ದುರುಪಯೋಗದ ಪ್ರಕರಣಗಳು ಪತ್ತೆಯಾಗಿಲ್ಲ'' ಎಂದು ಇದೆ. ಹಾಗೂ ಮುಂದುವರೆದು ''ಕಾರ್ಖಾನೆಯ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಯಾರೂ ಜವಾಬ್ದಾರರಲ್ಲ'' ಎಂದು ಇದೆ. ಇಂಗ್ಲಿಷ್ ಉತ್ತರದಲ್ಲೂ ಅದೇ ರೀತಿ ಇದೆ.

ಶ್ರೀ ಎಚ್. ಸಿ ಶ್ರೀಕಂಠಯ್ಯ.—ಅಧ್ಯಕ್ಷರೆ, ಮಾನ್ಯ ಸದಸ್ಯರು ''ಮಿಸ್ ಮೇನೇಜ್‌ಮೆಂಟ್'' ''ಮಿಸ್ ಯೂಟಿಲೈಸೇಷನ್'' ಎಂದು ಹೆಳಿದ್ದಾರೆ. ಅಲ್ಲಿ ಹಣ ಲೂಕ್ಸಾನ ಆಗಿದೆ. ಯಾರು ಹಣವನ್ನು ತಿಂದುಹಾಕಿದ್ದಾರೆಂದು ಕೇಳಿದರು. ಅಲ್ಲಿ ಹಣವನ್ನು ಯಾರೂ ತಿಂದು ಹಾಕಿಲ್ಲ. ಮಿಸ್ ಆಪ್ರೋಪ್ರಿಯೇಷನ್ ಆಗಿಲ್ಲ. ಆಲ್ಲಿ ಲುಕ್ಸಾನ ಆಗಿದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೆ, ದುರುಪಯೋಗದ ಪ್ರಕರಣ ಪತ್ತೆಯಾಗಿಲ್ಲ ಆದುದರಿಂದ ಸಂಭಂಧಿಸಿದ ಪ್ರಕರಣದಲ್ಲಿ ಯಾರೂ ಜವಾಬ್ದಾರರಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಉತ್ತರ ಸರಿಯಿಲ್ಲವೆಂದು ನನಗನ್ನಿಸುತ್ತದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಯಾರೂ ಜವಾಬ್ದಾರರಲ್ಲ ಎಂದು ಹೇಳಿದರೆ ದುರುಪಯೋಗ ಆಗಿಲ್ಲವೆಂದಲ್ಲವೇ ?

ಶ್ರೀ ಜಿ. ರಾಮೇಗೌಡ.—ಅಧ್ಯಕ್ಷರೆ, ಮಂತ್ರಿಗಳು ತಮ್ಮ ಉತ್ತರದಲ್ಲಿ ''ಸ್ಥಿರ ಆಸ್ತಿ ಹಾಗೂ ಯಂತ್ರೋಪಕರಣಗಳನ್ನು ವಿಲೆ ಮಾಡಲು ಕ್ರಮ ತೆಗೆದುಕೊಳ್ಳಲಿದ್ದಾರೆ'' ಎಂದು ತಿಳಿಸಿದ್ದಾರೆ. ಎಂದರೆ ಇದನ್ನು ಲಿಕ್ವಿಡೇಟ್ ಮಾಡಲಾಗುತ್ತದೆ ಎಂದು ಅರ್ಥವೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ಈಗಾಗಲೇ ಲಿಕ್ವಿಡೇಷನ್ ಆಗಿದೆ. ಇದರ ಲಿಕ್ವಿಡೇಟರ್ಸ್ ಬಳ್ಳಾರಿ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನವರು.

ಶ್ರೀ ಜಿ. ರಾಮೇಗೌಡ.—ಈ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಲಿಕ್ವಿಡೇಟ್ ಮಾಡುವುದು ತಮಗೆ ಸಮಾಧಾನವಾಗಿದೆಯೇ ?

ಅಧ್ಯಕ್ಷರು.—ಅದು ಸಕ್ಕರೆ ಕಾರ್ಖಾನೆಯಲ್ಲ. ಅದು ಕಬ್ಬನ್ನು ಕ್ರಯಾ ಮಾಡುವ ಕೋ-ಆಪರೇಟೀವ್ ಸೊಸೈಟಿ.

ಶ್ರೀ ಕೆ. ರಾಮಭಟ್.—ಅಧ್ಯಕ್ಷರೆ, ಅಷ್ಟು ಹಣ ಸಾಲವಾಗಿ ಕೊಡುವಾಗ ತಜ್ಞರನ್ನು ಕೇಳಲಿಲ್ಲವೇ ? ಅಲ್ಲಿನ ಆಫಿಶಿಯಲ್ಸ್ ಹಾಗೂ ಡೈರೆಕ್ಟರ್ಸ್ ಕಲೆತು ತಿಂದಿದ್ದಾರೆಯೇ ? ಅಲ್ಲಿನ ಆಫಿಶಿಯಲ್ಸ್ ರೆಕಮಂಡ್ ಮಾಡಿದ್ದಾರೆ, ಡೈರೆಕ್ಟರ್ಸ್ ಕೇಳಿದ್ದಾರೆ, ಸಾಲವನ್ನು ಮಂಜೂರು ಮಾಡಲಾಗಿದೆ. ಸೊಸೈಟಿ ಮುಳುಗಿಹೋಗಿದೆ. ಇದಕ್ಕೆ ಯಾರು ಜವಾಬ್ದಾರರು ? ಸುಮ್ಮನೆ ೧೨ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟುಬಿಟ್ಟಿದ್ದೇವೆಂದರೆ ಇದಕ್ಕೆ ಜವಾಬ್ದಾರರು ಯಾರು ? ಯಾರಿಗೆ ಜವಾಬ್ದಾರಿ ಫೀಕ್ಸ್ ಮಾಡಿ ಸಾಲವನ್ನು ಕೊಡಲಾಗಿದೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ಸುಮಾರು ೧೦ ವರ್ಷಗಳ ಅವಧಿವರೆಗೆ ಈ ಫ್ಯಾಕ್ಟರಿಯನ್ನು ಲೀಸ್‌ಗೆ ಕೊಡಲಾಗಿದೆ. ಲೆಸ್ಸಿ ಇದನ್ನು ೩ ವರ್ಷಗಳ ಕಾಲ ನಡೆಸಿ ಲುಕ್ಸಾನಾಗಿ ಅದನ್ನು ನಡೆಸುವುದನ್ನು ನಿಲ್ಲಿಸಿಬಿಟ್ಟಿದ್ದಾನೆ. ೧-೧೦-೮೨ಕ್ಕೆ ಲೀನ್ ಪೀರಿಯಡ್ ಮುಗಿಯುತ್ತದೆ. ನಂತರ

ಇದನ್ನು ಲಿಕ್ವಿಡೇಟ್ ಮಾಡಿ, ಯಾರಿ ಯಾರಿಗೆ ಹಣ ಕೊಡಬೇಕೋ ಅದನ್ನು ವಿಲೇವಾರಿ ಮಾಡಬೇಕೆಂದು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಕೆ. ಭಾಸ್ಕರ್ ನಾಯ್ಡು.—ಸಾಲವನ್ನು ಎಷ್ಟು ಕೊಡಬೇಕೋ ಅಷ್ಟು ಪ್ರಾಪರ್ಟಿ ಅಲ್ಲಿ ಇದೆಯೇ ? ಇಲ್ಲಾ ಅಲ್ಲಿ ಪ್ರಾಪರ್ಟಿ ಕಮ್ಮಿ ಇದ್ದು ಸಾಲ ಜಾಸ್ತಿ ಇದ್ದ ಪಕ್ಷದಲ್ಲಿ ಸರ್ಕಾರ ಅದನ್ನು ತುಂಬಿಸಿ ಹಣವನ್ನು ಕೊಡುತ್ತದೆಯೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಬಂದ ಹಣದಲ್ಲಿ ಇಷ್ಟು ಪರ್ಸೆಂಟ್ ಕೊಡಬೇಕೆಂದು ಕಾನೂನು ಇದೆ. ಅದರ ಪ್ರಕಾರ ಕೊಡಲಾಗುತ್ತದೆ. ಸರ್ಕಾರ ತನ್ನ ಕೈಯಿಂದ ಹಣ ಪಾಕಿ ಏನು ಕೊಡುವುದಿಲ್ಲ.

ಶ್ರೀ ಮುತ್ತಿನಪಿಂಡಿ ಮಠ್.—ಅಧ್ಯಕ್ಷರೆ. ಸಾಕಷ್ಟು ಸಹಕಾರಿ ಕಾರ್ಖಾನೆಗಳಲ್ಲಿ ದುರುಪಯೋಗ ವಾಗಿದೆಯೆಂದು ಸರ್ಕಾರಕ್ಕೆ ವರದಿಗಳು ಬಂದಿವೆ. ಸರ್ಕಾರ ಆ ಕಾರ್ಖಾನೆಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಯೆ ?

ಅಧ್ಯಕ್ಷರು.—ಸರಿಯಾದ ಪ್ರಶ್ನೆ ಕೇಳಿ.

ಶ್ರೀ ಮುತ್ತಿನಪಿಂಡಿ ಮಠ್.—ಗದಗ ಬೆಟಗೇರಿಯಲ್ಲಿನ ವಿಷಯವಾಗಿ ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

SRI K. BHASKAR NAIDU.—Will the Hon'ble Minister be able to tell me what are the properties left behind ? Has he got a list of the properties left behind ?

SRI H. C. SRIKANTAIAH.—Right now I don't have the details. Probably some machines are there and some land is there. I will provide him the information later on.

ಶ್ರೀ ಜಿ. ರಾಮೇಗೌಡ.—ಇಲ್ಲಿ, ''ಬಳ್ಳಾರಿ ತಾಲ್ಲೂಕಿನ ಹಡಗಲಿ ಸಕ್ಕರೆ ಕಾರ್ಖಾನೆ'' ಎಂದು ಮುದ್ರಿತವಾಗಿದೆ. ತಾವು ಪ್ರೊಸೆಸಿಂಗ್ ಯುನಿಟ್ ಎಂದು ಹೇಳುತ್ತೀರಿ. ಇದರ ವ್ಯತ್ಯಾಸ ಏನು ?

ಅಧ್ಯಕ್ಷರು.—ಹೌದು ಪ್ರೊಸೆಸಿಂಗ್ ಯೂನಿಟ್ ಆದು.

ಶ್ರೀ ಜಿ. ರಾಮೇಗೌಡ.—ಕಬ್ಬು ಅರೆದು ಸಕ್ಕರೆ ಮಾಡುವುದು ಎಂದರೆ ಏನು ?

ಅಧ್ಯಕ್ಷರು.—ಕಬ್ಬು ಅರೆದು ಸಕ್ಕರೆ ಮಾಡುವುದು ಎಂದು.

ಶ್ರೀ ಎಂ. ರಾಮಪ್ಪ.—ನನ್ನ ಪ್ರಶ್ನೆಗೆ ಸರಿಯಾದ ಉತ್ತರ ನನಗೆ ದೊರಕಲಿಲ್ಲ. ತಜ್ಞರ ವರದಿ ಇಲ್ಲದೇ ಸಾಲವನ್ನು ಕೊಡುವ ಪದ್ಧತಿ ಅನುಸರಿಸಿರುವುದರಿಂದ ಅಲ್ಲಿನ ಆಫಿಶಿಯಲ್ಸ್ ಹಾಗೂ ಡೈರೆಕ್ಟರ್ಸ್ ಈ ಹಣವನ್ನು ತಿಂದುಹಾಕಿದ್ದಾರೆ. ಈ ಬಗ್ಗೆ ಸರ್ಕಾರ ವಿವರ ಕೊಡಲಿ.

Appointment of Diploma holders in the State Government

175 SRI S. H. S. BAKSHI (Bijapur)—Will the Minister for Education be pleased to state:—

(a) whether it is a fact that representations are received by Government from the Diploma holders of P. U. C. (Diploma in Voc.) for not getting employment in the State ;

(b) if so, the steps taken by Government to appoint them on daily wages, as was done in the case of Polytechnic Diploma holders and Degree holders ?